ಕರ್ನಾಟಕ ಸರ್ಕಾರ
**ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಯಾದಗಿರಿ**
**ಕೋಣೆ ಸಂಖ್ಯೆ : ಸಿ–17, ಒಂದನೇ ಮಹಡಿ, ಜಿಲ್ಲಾ ಆಡಳಿತ ಭವನ ಸಂಕೀರ್ಣ, ಚಿತ್ತಾಪೂರ ರಸ್ತೆ, ಯಾದಗಿರಿ–585202**
Email_ID : ddwcdyad@gmail.com ಫೋನ್ : 08473–253739

**ಸಂಖ್ಯೆ :** ಉನಿಯಾ/ಮಮಅಇ/ಅಂ.ಕಾ.ಕ/ಅಂ.ಸ/ನೇಮಕಾತಿ/01/2018–19 **ದಿನಾಂಕ :**31/07/2018

## : ಅಧಿಸೂಚನೆ :

ಸರ್ಕಾರದ ಆದೇಶ ಸಂಖ್ಯೆ : ಮಮಇ 303 ಐಸಿಡಿ 2017 ದಿನಾಂಕ : 23.09.2017 ರ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿ ನೇಮಕಾತಿಯ ಪರಿಷ್ಕೃತ ಮಾರ್ಗಸೂಚಿಯಂತೆ ಮತ್ತು ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ: ಮಮಇ 303 ಐಸಿಡಿ 2017 ದಿನಾಂಕ : 01.12.2017 ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು ಯಾದಗಿರಿರವರ ಅನುಮೋದನೆಯಂತೆ, ಯಾದಗಿರಿ ಜಿಲ್ಲೆಯ 04–ಶಿಶು ಅಭಿವೃದ್ಧಿ ಯೋಜನೆಗಳಲ್ಲಿ ಖಾಲಿ ಇರುವ **13–ಅಂಗನವಾಡಿ ಕಾರ್ಯಕರ್ತೆ** (ಅನುಬಂಧ–1ರಲ್ಲಿ) ಮತ್ತು **35–ಅಂಗನವಾಡಿ ಸಹಾಯಕಿ** (ಅನುಬಂಧ–2ರಲ್ಲಿ) ಗೌರವ ಸೇವೆಯ ಹುದ್ದೆಗಳನ್ನು ಭರ್ತಿ ಮಾಡಲು ಆನ್‌ಲೈನ್ (ವೆಬ್ ಸೈಟ್ ವಿಳಾಸ : anganwadirecruit.kar.nic.in) ಮೂಲಕ ಈ ಕೆಳಗಿನ ಮಾರ್ಗಸೂಚಿ/ನಿಬಂಧನೆಗಳು ತಿಳಿಸಿರುವಂತೆ ಅರ್ಹ ಮಹಿಳಾ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದ್ದು. ಅರ್ಜಿ ಸಲ್ಲಿಸುವ ಪ್ರಾರಂಭದ **ದಿನಾಂಕ :04.08.2018 ಆಗಿದ್ದು ಕೊನೆಯ ದಿನಾಂಕ: 03.09.2018ರ** ಇರುತ್ತದೆ.

**ಸೂಚನೆಗಳು :**

1. ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿ ಹುದ್ದೆಗಳಿಗೆ ಅರ್ಜಿಗಳನ್ನು ಆನ್‌ಲೈನ್ (Online) ಮೂಲಕವೇ ಮಾತ್ರ ಸಲ್ಲಿಸತಕ್ಕದ್ದು, ಅರ್ಜಿಗಳನ್ನು ಇತರೆ ಯಾವುದೇ ಮೂಲದಿಂದ ಸಲ್ಲಿಸಲು ಅವಕಾಶವಿರುವುದಿಲ್ಲ, ಅವುಗಳನ್ನು ಪರಿಗಣಿಸಲಾಗುವುದಿಲ್ಲ.
2. ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಮೊದಲು ಈ ಕೆಳಗಿನ ನೇಮಕಾತಿಯ ಮಾರ್ಗಸೂಚಿ/ನಿಬಂಧನೆಗಳನ್ನು ಸ್ಪಷ್ಟವಾಗಿ ಓದಿಕೊಂಡು ನೀಡಲಾಗಿರುವ ಸೂಚನೆಯಂತೆ ಅರ್ಜಿಗಳನ್ನು ಭರ್ತಿ ಮಾಡಿ ಅವಶ್ಯಕ ಮೂಲ ದಾಖಲೆಗಳನ್ನು **ಸ್ಪಷ್ಟವಾಗಿ** ಸ್ಕ್ಯಾನ್ಯ ಮಾಡಿ ಅಪ್‌ಲೋಡ್ ಮಾಡಿ ಅರ್ಜಿ ಸಲ್ಲಿಸುವುದು.
3. ಆನ್‌ಲೈನ್ (Online) ಮೂಲಕವೇ ಎಲ್ಲಾ ಅಗತ್ಯ ದಾಖಲಾತಿಗಳುನ್ನು ಸಲ್ಲಿಸುವುದು, ತದನಂತರ ಸಲ್ಲಿಸುವ ದಾಖಲಾತಿಗಳನ್ನು ಪರಿಗಣಿಸುವುದಿಲ್ಲ.

**ಮಾರ್ಗಸೂಚಿ/ನಿಬಂಧನೆಗಳು :**

1. **ವಯೋಮಿತಿ :** ಕನಿಷ್ಠ 18ವರ್ಷ ದಿಂದ 35 ವರ್ಷಗಳ ವಯೋಮಿತಿಯೊಳಗಿರತಕ್ಕದ್ದು. ಅಂಗನವಾಡಿ ಕಾರ್ಯಕರ್ತೆ ನೇಮಕಾತಿಯಲ್ಲಿ ವಿಕಲಚೇತನರಿಗೆ 10 ವರ್ಷ ವಯೋಮಿತಿ ಸಡಲಿಕೆ ನೀಡಲಾಗಿರುತ್ತದೆ.
2. **ಸ್ಥಳೀಯತೆ :** ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿ ಹುದ್ದೆಗಳಿಗೆ ಸಂಬಂಧಿಸಿದಂತೆ ಗ್ರಾಮಾಂತರ ಪ್ರದೇಶದಲ್ಲಿ ಕೇಂದ್ರದ ವ್ಯಾಪ್ತಿಯ ಕಂದಾಯ ಗ್ರಾಮ**ವನ್ನು ಹಾಗೂ** ನಗರ ಪ್ರದೇಶದಲ್ಲಿ ಕೇಂದ್ರದ ವ್ಯಾಪ್ತಿಯ ಕಂದಾಯ ವಾರ್ಡ್‌ಗಳನ್ನು ಮಾತ್ರ ಪರಿಗಣಿಸಲಾಗುವುದು, ಚುನವಾಣಾ ವಾರ್ಡ್‌ಗಳನ್ನು ಪರಿಗಣಿಸಲಾಗುವುದಿಲ್ಲ. ಸ್ಥಳಿಯತೆಯ ಬಗ್ಗೆ ಅರ್ಜಿ ಸಲ್ಲಿಸಲು ನಿಗದಿಪಡಸಿದ ದಿನಾಂಕದಿಂದ **1 ವರ್ಷ ಅವಧಿಯೊಳಗಿನ ತಹಶೀಲ್ದಾರರು/ಉಪತಹಶೀಲ್ದಾರರಿಂದ** ಪಡೆದ **ವಾಸಸ್ಥಳ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ** ಅರ್ಜಿಯೊಂದಿಗೆ ಸಲ್ಲಿಸುವುದು.
3. **ಹುದ್ದೆಯ ಮೀಸಲಾತಿ :** ಹುದ್ದೆ ಖಾಲಿ ಇರುವ ಸ್ಥಳ, ಆ ಹುದ್ದೆ ಜನಸಂಖ್ಯೆ ಆಧಾರದಲ್ಲಿ ಯಾವ ವರ್ಗಕ್ಕೆ ಮೀಸಲಾಗಿದೆಯೊ ಆ ವರ್ಗಕ್ಕೆ ಒಳಪಡುವ ಅಭ್ಯರ್ಥಿಗಳ ಅರ್ಜಿಗಳನ್ನು ಮಾತ್ರ ಆಯ್ಕೆಗೆ ಪರಿಗಣಿಸಲಾಗುವುದು.
4. **ಮೀಸಲಾತಿ ನಿಗದಿ :** ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿ ಹುದ್ದೆಗಳು ಗೌರವಸೇವೆಗೆ ಸೇರಿದ್ದು, ಸರ್ಕಾರಿ ಹುದ್ದೆಗಳ ಮೀಸಲಾತಿ ತತ್ವಗಳು ಅನ್ವಯಿಸುವುದಿಲ್ಲ. ಅಂಗನವಾಡಿ ಕೇಂದ್ರ ಪ್ರಾರಂಭಿಸುವ ಗ್ರಾಮಾಂತರ ಪ್ರದೇಶದ ಕಂದಾಯ ಗ್ರಾಮ/ ನಗರ ಪ್ರದೇಶದ ಕಂದಾಯ ವಾರ್ಡನ ಒಟ್ಟು ಜನಸಂಖ್ಯೆಗೆ ಮತ್ತು ಒಂದೇ

2ನೇ ಪುಟಕ್ಕೆ

ಗ್ರಾಮ/ವಾರ್ಡ್‌ನಲ್ಲಿ ಒಂದಕ್ಕಿಂತ ಹೆಚ್ಚು ಅಂಗನವಾಡಿ ಕೇಂದ್ರಗಳಿದ್ದಾಗ, ಅಂಗನವಾಡಿ ಕೇಂದ್ರದ ವ್ಯಾಪ್ತಿಯ ಜನಸಂಖ್ಯೆಗೆ ಶೇಕಡ 40ಕ್ಕಿಂತ ಹೆಚ್ಚು ಪರಿಶಿಷ್ಟ ಜಾತಿ ಹಾಗೂ ಶೇಕಡ 40ಕ್ಕಿಂತ ಹೆಚ್ಚು ಪರಿಶಿಷ್ಟ ವರ್ಗದವರನ್ನು ಒಳಗೊಂಡಿದ್ದ ಸಂದರ್ಭದಲ್ಲಿ, ಈ ವರ್ಗಗಳ ಪೈಕಿ ಅತೀ ಹೆಚ್ಚು ಜನಸಂಖ್ಯೆಯಿರುವ ವರ್ಗದವರಿಗೆ ಕಾರ್ಯಕರ್ತೆ ಹುದ್ದೆಯನ್ನು ಮೀಸಲಿರಿಸಲಾಗುವುದು. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಕಾರ್ಯಕರ್ತೆ ಹುದ್ದೆ ಮೀಸಲಿಟ್ಟ ಕೇಂದ್ರಗಳಲ್ಲಿ ಆ ವರ್ಗಕ್ಕೆ ಸೇರಿದವರನ್ನು ಮಾತ್ರ ಆಯ್ಕೆ ಮಾಡಲಾಗುವುದು. 25%ಕ್ಕಿಂತ ಹೆಚ್ಚು ಅಲ್ಪಸಂಖ್ಯಾತ ಜನಸಂಖ್ಯೆಯಿರುವ ಪ್ರದೇಶದ ಅಂಗನವಾಡಿ ಕೇಂದ್ರಗಳಲ್ಲಿ ಕನ್ನಡ ಭಾಷೆಯೊಂದಿಗೆ ಉರ್ದು ಭಾಷೆ ಬಲ್ಲವರನ್ನು ಕಾರ್ಯಕರ್ತೆ ಹುದ್ದೆಗೆ ಆಯ್ಕೆ ಮಾಡಲಾಗುವುದು

5. **ವಿದ್ಯಾರ್ಹತೆ :**

- **ಅಂಗನವಾಡಿ ಕಾರ್ಯಕರ್ತೆ :** ಕನಿಷ್ಠ ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ ತೇರ್ಗಡೆಯಾಗಿರಬೇಕು. ಹೆಚ್ಚಿನ ವಿಧ್ಯಾರ್ಹತೆಯನ್ನು ಆಯ್ಕೆಗೆ ಪರಿಗಣಿಸುವುದಿಲ್ಲ.

ಅ) ಕರ್ನಾಟಕ ಪರೀಕ್ಷಾ ಮಂಡಳಿ ನಡೆಸುವ ಮುಕ್ತ ಶಾಲೆ/ಮುಕ್ತ ವಿಧ್ಯಾಲಯಗಳಲ್ಲಿ ಎಸ್.ಎಸ್.ಎಲ್.ಸಿ ತೇರ್ಗಡೆ ಹೊಂದಿದ ಅಭ್ಯರ್ಥಿಗಳು ಪ್ರಥಮ/ದ್ವಿತೀಯ ಭಾಷೆಯಾಗಿ ಕನ್ನಡ ಹಾಗೂ ಸಾಮಾನ್ಯ ಗಣಿತ ಮತ್ತು ಸಮಾಜಶಾಸ್ತ್ರ /ಸಮಾಜ ವಿಜ್ಞಾನ ವಿಷಯಗಳನ್ನು ಕಡ್ಡಾಯವಾಗಿ ವ್ಯಾಸಂಗ ಮಾಡಿದ್ದು, ಪ್ರಮಾಣ ಪತ್ರ / ಅಂಕಪಟ್ಟಿಯು ಗರಿಷ್ಠ 625, ಕನಿಷ್ಠ 219 ಅಂಕಗಳನ್ನು ಹೊಂದಿದಲ್ಲಿ, ಅಂತಹ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದು.

ಆ) ಬೇರೆ ರಾಜ್ಯಗಳ ಶಾಲೆಗಳಲ್ಲಿ ವ್ಯಾಸಂಗ ಮಾಡಿದ್ದು, ಕನ್ನಡವನ್ನು ಪ್ರಥಮ/ದ್ವಿತೀಯ ಭಾಷೆಯಾಗಿ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ನಿಗದಿಪಡಿಸಿದ ಗರಿಷ್ಠ ಅಂಕಗಳ ಹಾಗೂ ಕರ್ನಾಟಕ ರಾಜ್ಯದಲ್ಲಿ ನಿಗದಿಪಡಿಸಿದ ಗರಿಷ್ಠ ಅಂಕಗಳಲ್ಲಿ ವ್ಯತ್ಯಾಸವಿದ್ದಲ್ಲಿ ಕರ್ನಾಟಕದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳನ್ನು ಮಾತ್ರ ಪರಿಗಣಿಸಲಾಗುವುದು.

ಇ) ಕರ್ನಾಟಕ ಪರೀಕ್ಷಾ ಮಂಡಳಿ ಹೊರತುಪಡಿಸಿ ಇತರೆ ಮುಕ್ತ ಶಾಲೆ/ಮುಕ್ತ ವಿಧ್ಯಾಲಯಗಳಿಂದ ಎಸ್.ಎಸ್.ಎಲ್.ಸಿ ಉತ್ತೀರ್ಣತೆಯ ಬಗ್ಗೆ ಪಡೆದ ಅಂಕಪಟ್ಟಿ/ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ.

**ಈ**) ಅಂಗನವಾಡಿ ಕಾರ್ಯಕರ್ತೆಯರು ಶಾಲಾ ಪೂರ್ವ ಶಿಕ್ಷಣವನ್ನು ನಿರ್ವಹಿಸಬೇಕಾಗಿರುವುದರಿಂದ ಹಾಗೂ ದಾಖಲೆಗಳನ್ನು ಕನ್ನಡದಲ್ಲಿ ನಿರ್ವಹಿಸಬೇಕಾಗಿರುವದರಿಂದ ಅಭ್ಯರ್ಥಿಗಳು ಯಾವುದೇ ಭಾಷಾ ಮಾದ್ಯಮದಲ್ಲಿ ವ್ಯಾಸಂಗ ಮಾಡಿದರೂ ಹಾಗೂ ಯಾವುದೇ ರಾಜ್ಯದಲ್ಲಿ ವ್ಯಾಸಂಗ ಮಾಡಿದರೂ ಸಹ ಅವರು ಕನ್ನಡ ಭಾಷೆಯನ್ನು ಓದುವ, ಬರೆಯುವ, ಮತ್ತು ಮಾತನಾಡುವ ಜ್ಞಾನವನ್ನು ಹೊಂದಿರಬೇಕು. ಕನ್ನಡವನ್ನು ಒಂದು ಭಾಷೆಯಾಗಿ ಕಡ್ಡಾಯವಾಗಿ ವ್ಯಾಸಂಗ ಮಾಡಿರಬೇಕು. ಕನ್ನಡವನ್ನು 3ನೇ ಭಾಷೆಯಾಗಿ ವ್ಯಾಸಂಗ ಮಾಡಿದ್ದು, ಹಾಗೂ ಮಾತೃಭಾಷೆ ಕನ್ನಡವಲ್ಲದೆ ಇರುವ ಅಭ್ಯರ್ಥಿಗಳನ್ನು ಆಯ್ಕೆ ಸಮಿತಿಯು ಆಯ್ಕೆ ಸಮಯದಲ್ಲಿ ಅಂತಹ ಅಭ್ಯರ್ಥಿಗಳಿಗೆ ಸಂದರ್ಶನ ಏರ್ಪಡಿಸಿ ಹಾಗೂ ಅವಶ್ಯವಿದ್ದಲ್ಲಿ ಕನ್ನಡ ಕನಿಷ್ಠ ಜ್ಞಾನದ ಕುರಿತಂತೆ ಓದಿಸಿ, ಬರೆಯಿಸಿ ಅವರ ಕನ್ನಡ ಭಾಷೆ ಜ್ಞಾನವನ್ನು ಪರೀಕ್ಷಿಸಿ ಅವರ ಆಯ್ಕೆಯನ್ನು ಮಾಡುವ ಬಗ್ಗೆ ಸಮಿತಿಯವರೇ ನಿರ್ಧರಿಸಬಹುದಾಗಿರುತ್ತದೆ.

ಇ) ಅಭ್ಯರ್ಥಿಯು ಮೇರಿಟ್ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು. ಒಂದಕ್ಕಿಂತ ಹೆಚ್ಚು ಅಭ್ಯರ್ಥಿಗಳು ಸಮಾನ ಅಂಕ ಗಳಿಸಿದ್ದಲ್ಲಿ ವಯೋ ಹಿರಿತನ ಪರಿಗಣಿಸಲಾಗುವುದು. ವಯಸ್ಸು ಸಮನಾವಾಗಿದ್ದಲ್ಲಿ ವಿವಾಹಿತರನ್ನು ಪರಿಗಣಿಸಲಾಗುವುದು.

**ಅಂಗನವಾಡಿ ಸಹಾಯಕಿ :** ಕನಿಷ್ಠ 04ನೇ ತರಗತಿ ಗರಿಷ್ಠ 09ನೇ ತರಗತಿ ತೇರ್ಗಡೆ, ಹೆಚ್ಚಿನ ವಿಧ್ಯಾರ್ಹತೆಯನ್ನು ಆಯ್ಕೆಗೆ ಪರಿಗಣಿಸುವುದಿಲ್ಲ.

ಅ) 4ನೇ ತರಗತಿ ವಿದ್ಯಾರ್ಹತೆಯುಳ್ಳವರು ಒಂದಕ್ಕಿಂತ ಹೆಚ್ಚು ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದಲ್ಲಿ ಹೆಚ್ಚು ಅಂಕಗಳಿಸಿದವರನ್ನು ಆಯ್ಕೆ ಮಾಡಲಾಗುವುದು.

ಆ) 4 ನೇ ತರಗತಿಗಿಂತ ಹೆಚ್ಚು ವಿದ್ಯಾರ್ಹತೆಯುಳ್ಳವರು ಅರ್ಜಿ ಸಲ್ಲಿಸಿದಲ್ಲಿ 9ನೇ ತರಗತಿ ವಿದ್ಯಾರ್ಹತೆಗೆ ಮಿತಿಗೊಳಿಸಿ ಇದರಲ್ಲಿ ಹೆಚ್ಚು ವಿದ್ಯಾರ್ಹತೆಯುಳ್ಳ ಸ್ಥಳೀಯರನ್ನು ಆಯ್ಕೆ ಮಾಡಲಾಗುವುದು.

ಇ) ಒಂದೇ ವಿದ್ಯಾರ್ಹತೆಯುಳ್ಳ ಒಂದಕ್ಕಿಂತ ಹೆಚ್ಚು ಅರ್ಜಿ ಬಂದಲ್ಲಿ ಹೆಚ್ಚು ಅಂಕಗಳಿಸಿದವರನ್ನು ಆಯ್ಕೆ ಮಾಡಲಾಗುವುದು.

3ನೇ ಪುಟಕ್ಕೆ

ಈ) 9ನೇ ತರಗತಿಗಿಂತ ಹೆಚ್ಚಿನ ವಿದ್ಯಾರ್ಹತೆಯನ್ನು ಪರಿಗಣಿಸುವದಿಲ್ಲ. (ಅಭ್ಯರ್ಥಿಗಳು 9 ನೇ ತರಗತಿ ಪಾಸಾದ ಅಂಕ ಪಟ್ಟಿ ಲಗತ್ತಿಸುವುದು. ಕಡ್ಡಾಯ, ಒಂದುವೇಳೆ ಎಸ್.ಎಸ್.ಎಲ್.ಸಿ ಪಾಸಾದ ಅಂಕ ಪಟ್ಟ ಲಗತ್ತಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು)

ಉ) ಅಂಗನವಾಡಿ ಸಹಾಯಕಿ ಹುದ್ದೆಗೆ ಅಭ್ಯರ್ಥಿಗಳು ಯಾವುದೇ ಭಾಷಾ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದರೂ ಹಾಗೂ ಯಾವುದೇ ರಾಜ್ಯದಲ್ಲಿ ವ್ಯಾಸಂಗ ಮಾಡಿದರೂ ಸಹ ಕನ್ನಡ ಭಾಷೆಯನ್ನು ಓದುವ, ಬರೆಯುವ ಮತ್ತು ಮಾತಾನಾಡುವ ಜ್ಞಾನವಿರಬೇಕು.

ಊ) ಬೇರೆ ರಾಜ್ಯಗಳಲ್ಲಿ ವ್ಯಾಸಂಗ ಮಾಡಿದ್ದು, ವಿದ್ಯಾರ್ಹತೆ ನಿಗದಿಪಡಿಸಿದ ಗರಿಷ್ಠ ಅಂಕಗಳು ಹಾಗೂ ಕರ್ನಾಟಕ ರಾಜ್ಯದಲ್ಲಿ ನಿಗದಿಪಡಿಸಿದ ಗರಿಷ್ಠ ಅಂಕಗಳಲ್ಲಿ ವ್ಯತ್ಯಾಸವಿದ್ದಲ್ಲಿ ಕರ್ನಾಟಕದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳನ್ನು ಮಾತ್ರ ಪರಿಗಣಿಸಲಾಗುವುದು.

6. ಆಯ್ಕೆಯ ಆದ್ಯತೆ : ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿ ಹುದ್ದೆಗಳಿಗೆ ಈ ಕೆಳಕಂಡ ಆದ್ಯತೆ ಪಡೆಯಲು ಇಚ್ಛಿಸುವ ಅರ್ಜಿದಾರರು ನಿಗದಿತ ವಿದ್ಯಾರ್ಹತೆ ಹೊಂದಿದ್ದು, ವಯೋಮಿತಿಯೊಳಗೆ, ನಿಗದಿತ ಮೀಸಲಾತಿ ಮತ್ತು ಸ್ಥಳೀಯರಾಗಿರಬೇಕು.

i. **ಆಸಿಡ್ ದಾಳಿಗೊಳಗಾದವರ ಆಯ್ಕೆ :** ಆಸಿಡ್ ದಾಳಿಗೆ ತುತ್ತಾದ ಮಹಿಳೆಯರು ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ್ದಲ್ಲಿ, ಇತರೆ ಎಲ್ಲಾ ಅರ್ಜಿಗಳನ್ನು ಸ್ವೀಕೃತ ಅರ್ಜಿಗಳನ್ನು ಪರಿಗಣಿಸದೆ ಮೊದಲ ಆದ್ಯತೆ ಮೇರೆಗೆ ನೇರವಾಗಿ ಅವರನ್ನೆ ಆಯ್ಕೆ ಮಾಡಲಾಗುವುದು.

ii. **ಇಲಾಖೆಯ ಸಂಸ್ಥೆಗಳ ನಿವಾಸಿಗಳ ಆಯ್ಕೆ :** ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿ ಹುದ್ದೆಗಳಿಗೆ ಬಾಲನ್ಯಾಯ ಕಾಯ್ದೆಯಡಿ ಇಲಾಖೆಯ ಸಂಸ್ಥೆಗಳಲ್ಲಿ ಹಾಗೂ ರಾಜ್ಯ ಮಹಿಳಾ ನಿಲಯಗಳಲ್ಲಿ ಆಶ್ರಯ ಪಡೆದ ಹಾಲಿ/ಮಾಜಿ ನಿವಾಸಿಗಳು ಅರ್ಜಿ ಸಲ್ಲಿಸಿದ್ದಲ್ಲಿ, ಆಯ್ಕೆಯ ಆದ್ಯತೆಯ (ಕ್ರಮ ಸಂಖ್ಯೆ : i )ನೆಯವರನ್ನು ಹೊರತುಪಡಿಸಿ ಇತರೆ ಎಲ್ಲಾ ಅರ್ಜಿಗಳನ್ನು ಸ್ವೀಕೃತ ಅರ್ಜಿಗಳನ್ನು ಪರಿಗಣಿಸದೆ ಎರಡನೇ ಆದ್ಯತೆ ಮೇರೆಗೆ ನೇರವಾಗಿ ಅವರನ್ನೆ ಆಯ್ಕೆ ಮಾಡಲಾಗುವುದು.

iii. **ವಿಧವೆಯರ ಆಯ್ಕೆ :** ಅ) ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿ ಹುದ್ದೆಗಳಿಗೆ ವಿಧವೆಯರು ಅರ್ಜಿ ಸಲ್ಲಿಸಿದ್ದಲ್ಲಿ, ಆಯ್ಕೆಯ ಆದ್ಯತೆಯ (ಕ್ರಮ ಸಂಖ್ಯೆ : I & II )ನೆಯವರನ್ನು ಹೊರತುಪಡಿಸಿ ಇತರೆ ಎಲ್ಲಾ ಅರ್ಜಿಗಳನ್ನು ಸ್ವೀಕೃತ ಅರ್ಜಿಗಳನ್ನು ಪರಿಗಣಿಸದೆ ಮೂರನೇ ಆದ್ಯತೆ ಮೇರೆಗೆ ನೇರವಾಗಿ ಅವರನ್ನೆ ಆಯ್ಕೆ ಮಾಡಲಾಗುವುದು. ಆ) ವಿಧವೆಯರಲ್ಲಿ, ಆತ್ಮಹತ್ಯೆ ಮಾಡಿಕೊಂಡ ರೈತರ ಪತ್ನಿಗೆ (ವಿಧವೆಗೆ) ಪ್ರಥಮ ಆದ್ಯತೆ ನೀಡಲಾಗುವುದು ಈ ಬಗ್ಗೆ ಉಪವಿಭಾಗಧಿಕಾರಿಗಳಿಂದ ಪ್ರಮಾಣ ಪತ್ರ ಪಡೆದು ಸಲ್ಲಿಸುವುದು. ಇ) ವಿಧವೆಯರು ತಾವು ಪ್ರಸ್ತುತ ಎಲ್ಲಿ ವಾಸವಿರುವುದಾಗಿ, ವಾಸಸ್ಥಳ ದೃಢೀಕರಣವನ್ನು ಸಲ್ಲಿಸಿರುತ್ತಾರೆ, ಆ ಸ್ಥಳವನ್ನು ಅವರ ಸ್ಥಳವೆಂದು ಪರಿಗಣಿಸಲಾಗುವುದು. ಈ) ಒಂದೇ ಹುದ್ದೆಗೆ ಇಬ್ಬರು ವಿಧವೆಯರು ಅರ್ಜಿ ಸಲ್ಲಿಸಿದಲ್ಲಿ ಗರಿಷ್ಠ ಅಂಕ ಪಡೆದವರನ್ನು ಆಯ್ಕೆ ಮಾಡಲಾಗುವುದು ಉ) ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ಅರ್ಜಿ ಸಲ್ಲಿಸಿದ ನಂತರ ವಿಧವೆಯಾದಲ್ಲಿ ಅದನ್ನು ಪರಿಗಣಿಸಲಾಗುವುದಿಲ್ಲ.

**iv. ಅಂಗವಿಕಲರ ಆಯ್ಕೆ :**

ಅ) ಅಂಗನವಾಡಿ ಕಾರ್ಯಕರ್ತೆಯರ ಹುದ್ದೆಗಳಿಗೆ ಅಂಗವಿಕಲರು ಅರ್ಜಿ ಸಲ್ಲಿಸಿದಾಗ, ಮಾರ್ಗಸೂಚಿಯ ಆಯ್ಕೆಯ ಆದ್ಯತೆಯ (i),(ii) ಮತ್ತು (iii)ನೆಯವರನ್ನು ಹೊರತು ಪಡಿಸಿ ಇತರ ಎಲ್ಲಾ ಸ್ವೀಕೃತ ಅರ್ಜಿಗಳನ್ನು ಪರಿಗಣಿಸಿದ ನಾಲ್ಕನೆ ಆದ್ಯತೆ ಮೇರೆಗೆ ನೇರವಾಗಿ ಅವರನ್ನೆ ಆಯ್ಕೆ ಮಾಡತಕ್ಕದ್ದು.

ಆ) ಅಂಗವಿಕಲರು ಪ್ರಸ್ತುತ ತಾವು ಎಲ್ಲಿ ವಾಸವಾಗಿರುವುದಾಗಿ ವಾಸಸ್ಥಳ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೋ ಆ ಸ್ಥಳವನ್ನೆ ಅವರ ವಾಸಸ್ಥಳವೆಂದು ಪರಿಗಣಿಸತಕ್ಕದ್ದು.

ಇ) ಅಂಗನವಾಡಿ ಕಾರ್ಯಕರ್ತೆ ಹುದ್ದೆಯಲ್ಲಿ 3–6 ವರ್ಷ ಮಕ್ಕಳಿಗೆ ಆಟ ಮತ್ತು ಅಭಿನಯ ಗೀತೆಗಳ ಮೂಲಕ ಶಾಲಾ ಪೂರ್ವ ಶಿಕ್ಷಣವನ್ನು ನೀಡಲಾಗುತ್ತಿದ್ದು ಚಟುವಟಿಕೆ ವೇಳೆಯಲ್ಲಿ ಮಕ್ಕಳನ್ನು ಹಿಡಿದೆತ್ತಿ ಸಲ್ಲಿಸಲು ಹಾಗೂ ಅಭಿನಯ ಮಾಡಿ ತೋರಿಸಬೇಕಾಗಿರುತ್ತದೆ. ವೃತ್ತಸಭೆ, ತಾಯಂದಿರ ಸಭೆ ಮತ್ತು ಮನೆ ಭೇಟಿ ನಿರ್ವಹಿಸಬೇಕಾಗಿರುತ್ತದೆ. ಆದ ಕಾರಣ ಕಿವುಡರ ಮತ್ತು ಮೂಕರು, ಕುರುಡರು, ಬುದ್ದಿ ಮಾಂದ್ಯರು, ಮಾನಸಿಕ ಅಸ್ವಸ್ಥರು ಕಾರ್ಯಕರ್ತೆ ಹುದ್ದೆಗೆ ಅರ್ಹರಲ್ಲ.

4ನೇ ಪುಟಕ್ಕೆ

ಈ) ಅಂಗನವಾಡಿ ಸಹಾಯಕಿಯ ಹುದ್ದೆಯಲ್ಲಿ ಅಂಗನವಾಡಿ ಫಲಾನುಭವಿಗಳಿಗೆ ಪೂರಕ ಪೌಷ್ಠಿಕ ಆಹಾರವನ್ನು ಬೇಯಿಸಿ/ಸಿದ್ದಪಡಿಸಿ ಉಣಬಡಿಸುವುದು, ಕೇಂದ್ರವನ್ನು ಸ್ವಚ್ಛಗೊಳಿಸುವುದು, ಮಕ್ಕಳನ್ನು ಅವರ ಮನೆಗಳಿಂದ ಕೇಂದ್ರಕ್ಕೆ ಕರೆತರುವುದು ಹಾಗೂ ಕಾರ್ಯಕರ್ತೆಯು ವೃತ್ತಸಭೆ, ತಾಯಂದಿರ ಸಭೆ ಮತ್ತು ಭೇಟಿಗೆ ಹೋದಾಗ ಅಂಗನವಾಡಿ ಕೇಂದ್ರದ ಜವಾಬ್ದಾರಿಯನ್ನು ನಿರ್ವಹಿಸಬೇಕು. ಆದ್ದರಿಂದ ಸಹಾಯಕಿ ಹುದ್ದೆಗೆ ಅಂಗವಿಕಲ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.

ಉ) ಇತರೆ ದೈಹಿಕ ಅಂಗವೈಕಲ್ಯತೆ ಶೇ.60 ಮೀರದಂತೆ ಇರುವವರು ಅರ್ಜಿ ಸಲ್ಲಿಸಬಹುದಾಗಿದೆ. ಅಂಗೀಕೃತ ಪ್ರಾಧಿಕಾರ (ಜಿಲ್ಲಾ ವೈದ್ಯಕೀಯ ಮಂಡಳಿ) ದಿಂದ ಪಡೆದ ಪ್ರಮಾಣ ಪತ್ರವನ್ನು ಅರ್ಜಿಯೊಂದಿಗೆ ಹಾಜರುಪಡಿಸಬೇಕು.

ಊ) ಅಂಗವಿಕಲ ಅಭ್ಯರ್ಥಿಗಳನ್ನು ಆಯ್ಕೆಮಾಡುವ ಸಂದರ್ಭದಲ್ಲಿ ಅಂಗವಿಕಲತೆಯ ಪ್ರಮಾಣದ ಬಗ್ಗೆ ಸಂಶಯ ಉಂಟಾದಲ್ಲಿ ಆ ಅಭ್ಯರ್ಥಿಯನ್ನು ಆಯ್ಕೆ ಸಮಿತಿಯ ಮುಂದೆ ಖುದ್ದು ಹಾಜರಾಗಲು ಸೂಚಿಸಿ ಸದರಿ ಹುದ್ದೆ ನಿರ್ವಹಿಸಲು ಸಮರ್ಥರಿರುವ ಬಗ್ಗೆ ಸಮಿತಿಯೇ ಪರಿಶೀಲಿಸಿ ನಿರ್ಧರಿಸತಕ್ಕದ್ದು.

ಋ) ಅಂಗವಿಕಲತೆಯ ಬಗ್ಗೆ ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪಡೆದ ಪ್ರಮಾಣ ಪತ್ರವನ್ನು ಮಾತ್ರ ಪರಿಗಣಿಸಲಾಗುವುದು. ಇತರೆ ಯಾವುದೇ ಮೂಲದಿಂದ ಪಡೆದ ಪ್ರಮಾಣ ಪತ್ರವನ್ನು ಪರಿಗಣಿಸಲಾಗುವುದಿಲ್ಲ.

ಎ) ಒಂದೇ ಹುದ್ದೆಗೆ ಇಬ್ಬರು ಅಂಗವಿಕಲರು ಅರ್ಜಿ ಸಲ್ಲಿಸಿದ್ದಲ್ಲಿ ಗರಿಷ್ಠ ಅಂಕ ಪಡೆದವರನ್ನು ಆಯ್ಕೆ ಮಾಡಬಹುದಾಗಿದೆ.

**07. ಬೋನಸ್ ಅಂಕಗಳು (ಅಂಗನವಾಡಿ ಕಾರ್ಯಕರ್ತೆ/ ಸಹಾಯಕಿಯರಿಗೆ)**

1. ಮಾಜಿ ದೇವದಾಸಿಯ ಮಗಳು,
2. ಯೋಜನಾ ನಿರಾಶ್ರಿತರು.
3. ವಿಚ್ಛೇದಿತ ಮಹಿಳೆಯರು,
4. ಪರಿತ್ಯಕ್ತೆಯರು

ಹೆಚ್ಚಿನ 5 ಬೋನಸ್ ಅಂಕಗಳಿಗೆ ಅರ್ಹರಾಗಿರುತ್ತಾರೆ. ಪ್ರತಿ ವಿನಾಯಿತಿಗೂ 5 ಬೋನಸ್ ಅಂಕ ನೀಡುವುದು, ಆದರೆ ಯಾವುದೇ ಕಾರಣಕ್ಕೂ ಅವರು ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕಕ್ಕೆ ಶೇಕಡಾ 5(5%) ಅಂಕ ನೀಡುವಂತಿಲ್ಲ. ಉದಾ: ಒಬ್ಬ ಅಭ್ಯರ್ಥಿಯು ನಿರಾಶ್ರಿತರು, ಪರಿತ್ಯಕ್ತೆ, ಮಾಜಿ ದೇವದಾಸಿ, ವಿಚ್ಛೇದಿತರು ಆಗಿದ್ದಲ್ಲಿ ಪ್ರತಿ ವಿನಾಯಿತಿಗೂ 5 ಬೋನಸ್ ಅಂಕಗಳನ್ನು ನೀಡುವುದು. ಅಂದರೆ ಸದರಿಯವರು ನಿಗದಿತ ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕಗಳಿಗೆ ಮಾಜಿ ದೇವದಾಸಿಯರ ಅವಿವಾಹಿತ ಹೆಣ್ಣು ಮಕ್ಕಳು+5, ಯೋಜನಾ ನಿರಾಶ್ರಿತರು+5, ವಿಚ್ಛೇದಿತ ಮಹಿಳೆಯರು+5, ಪರಿತ್ಯಕ್ತೆಯರು+5, ಒಟ್ಟು 20 ಬೋನಸ್ ಅಂಕಗಳನ್ನು ನೀಡುವುದು. ಬೋನಸ್ ಅಂಕ ಪಡೆಯಲು ಸಂಬಂಧಿತ ದಾಖಲೆಗಳನ್ನು ಅರ್ಜಿಯೊಂದಿಗೆ ಲಗತ್ತಿಸಬೇಕಾಗಿರುವುದು ಕಡ್ಡಾಯ.

**ಆನ್–ಲೈನ್ ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳು:–**

1. ಅರ್ಜಿ ನಿಗದಿತ ನಮೂನೆಯಲ್ಲಿ.(ಆನ್–ಲೈನ್)
2. ಜನನ ಪ್ರಮಾಣ ಪತ್ರ / ಜನ್ಮ ದಿನಾಂಕ ಎಸ್.ಎಸ್.ಎಲ್.ಸಿ. ಅಂಕ ಪಟ್ಟಿ.
3. ನಿಗದಿತ ವಿದ್ಯಾರ್ಹತೆಯ ಅಂಕಪಟ್ಟಿ.
4. ತಹಶೀಲ್ದಾರರು/ ಉಪತಹಶೀಲ್ದಾರರಿಂದ ಪಡೆದ ಒಂದು(1) ವರ್ಷದೊಳಗಿನ ವಾಸಸ್ಥಳ ದೃಢೀಕರಣ ಪತ್ರ.
5. ಅಭ್ಯರ್ಥಿಗಳ ಜಾತಿ ಪ್ರಮಾಣ ಪತ್ರ.
6. ಪತಿಯ ಮರಣ ಪ್ರಮಾಣ ಪತ್ರ.(ವಿಧವಾ ವೇತನದ ದೃಢೀಕರಣವನ್ನು ಪರಿಗಣಿಸುವಂತಿಲ್ಲ)

5ನೇ ಪುಟಕ್ಕೆ

7. ಆತ್ಮಹತ್ಯೆ ಮಾಡಿಕೊಂಡ ರೈತರ ಪತ್ನಿ ಎಂದು ಉಪ ವಿಭಾಗಾಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ.
8. ಅಂಗವಿಕಲತೆ ಪ್ರಮಾಣ ಪತ್ರ.(ಅಂಗವಿಕಲ ವೇತನದ ಧೃಢೀಕರಣವನ್ನು ಪರಿಗಣಿಸುವಂತಿಲ್ಲ)
9. ವಿಚ್ಛೇಧನ ಪ್ರಮಾಣ ಪತ್ರ. (ನ್ಯಾಯಾಲಯದಿಂದ ಪಡೆದಿರಬೇಕು)
10. ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ದಿ ನಿಗಮದ ವತಿಯಿಂದ ನಡೆಸಲ್ಪಟ್ಟ ಮಾಜಿ ದೇವದಾಸಿಯರ ಸಮೀಕ್ಷೆಯ ಪಟ್ಟಿಯಲ್ಲಿರುವ ಮಾಜಿ ದೇವದಾಸಿಯರ ಮಕ್ಕಳು ಎಂಬುದರ ಬಗ್ಗೆ ಮಹಿಳಾ ಅಭಿವೃದ್ದಿ ನಿಗಮದ ಅಧಿಕಾರಿಗಳಿಂದ ಪ್ರಮಾಣ ಪತ್ರ.
11. ಪರಿತ್ಯಕ್ತೆ ಬಗ್ಗೆ ಗ್ರಾಮಪಂಚಾಯ್ತಿಯಿಂದ ಪಡೆದ ಪ್ರಮಾಣ ಪತ್ರ.
12. ಇಲಾಖೆಯ ಸುಧಾರಣಾ ಸಂಸ್ಥೆ/ ರಾಜ್ಯ ಮಹಿಳಾ ನಿಲಯಗಳ ನಿವಾಸಿ ಬಗ್ಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆಯ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ.
13. ಯೋಜನಾ ನಿರಾಶ್ರಿತರ ಬಗ್ಗೆ ತಹಶೀಲ್ದಾರರಿಂದ ಪಡೆದ ಪ್ರಮಾಣ ಪತ್ರ.

ಹೆಚ್ಚಿನ ಮಾಹಿತಿಗಾಗಿ ಸಂಬಂಧಸಿದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಯನ್ನು ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ತಿಳಿಸಿದೆ.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸ ಬೇಕಾದ ವಿಳಾಸ :**

| ಕ್ರ.ಸಂ | ಶಿಶು ಅಭಿವೃದ್ಧಿ ಯೋಜನೆ | ವಿಳಾಸ | ದೂರವಾಣಿ ಸಂಖ್ಯೆ |
|---|---|---|---|
| 01. | ಶಹಾಪೂರ | ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಗಂಜ್ ಏರಿಯಾ, ಶಹಾಪೂರ | 08479-243254 |
| 02. | ಸುರಪುರ | ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಗಂಜ್ ಏರಿಯಾ, | 08443-256808 |
| 03. | ಯಾದಗಿರಿ | ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, 1ನೇ ಮಹಡಿ ಸ್ತ್ರೀ ಶಕ್ತಿ ಭವನ, ಜಿಲ್ಲಾ ಆಸ್ಪತ್ರೆ ರಸ್ತೆ, ಯಾದಗಿರಿ | 08473-252265 |
| 04. | ಗುರುಮಠಕಲ್ | ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಗಾಂಧಿ ಮೈದಾನದ ಹತ್ತಿರ, ಗುರುಮಠಕಲ್ | 08473-225035 |

**ಉಪನಿರ್ದೇಶಕರು**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಯಾದಗಿರಿ

**ಪ್ರತಿಯನ್ನು :**

1. ಮಾನ್ಯ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರುರವರ ದಯಾಪರ ಮಾಹಿತಿಗಾಗಿ.
2. ಮಾನ್ಯ ಜಿಲ್ಲಾಧಿಕಾರಿಗಳು, ಯಾದಗಿರಿರವರ ದಯಾಪರ ಮಾಹಿತಿಗಾಗಿ.
3. ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಯಾದಗಿರಿರವರ ದಯಾಪರ ಮಾಹಿತಿಗಾಗಿ.

6ನೇ ಪುಟಕ್ಕೆ

4. ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕಾ ಪಂಚಾಯತ್, ಯಾದಗಿರಿ/ಶಹಾಪೂರ/ಸುರಪುರ ರವರ ಮಾಹಿತಿಗಾಗಿ, (ಸಂಬಂಧಿಸಿದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಮುಖಾಂತರ)
5. ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಯಾದಗಿರಿರವರ ಮಾಹಿತಿಗಾಗಿ ಹಾಗೂ ಸದರಿ ಪ್ರಕಟಣೆಯನ್ನು ಉಚಿತವಾಗಿ ದಿನ ಪತ್ರಿಕೆಯಲ್ಲಿ ಪ್ರಕಟಿಸಲು ಕೋರಲಾಗಿದೆ.
6. ತಾಲೂಕಾ ಆರೋಗ್ಯ ಅಧಿಕಾರಿಗಳು, ಯಾದಗಿರಿ/ಶಹಾಪೂರ/ಸುರಪುರ ರವರ ಮಾಹಿತಿಗಾಗಿ (ಸಂಬಂಧಿಸಿದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಮುಖಾಂತರ)
7. ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಯಾದಗಿರಿ/ಶಹಾಪೂರ/ಸುರಪುರ ರವರ ಮಾಹಿತಿಗಾಗಿ (ಸಂಬಂಧಿಸಿದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಮುಖಾಂತರ)
8. ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಶಹಾಪೂರ/ಸುರಪುರ/ಯಾದಗಿರಿ/ಗುರುಮಠಕಲ್‌ರವರ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
9. ಪ್ರಕಟಣೆ ಪ್ರತಿ.
10. ಕಛೇರಿ ಕಡತಕ್ಕೆ.

ಅನುಬಂಧ–1

# ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆ ಹುದ್ದೆಗಳು

| Sl.no | ICDS Project | Anganwadi Centre name | Grama Panchayath / Ward no. | Reserved for ( SC/ST/Others) |
|---|---|---|---|---|
| 1 | 2 | 3 | 4 | 5 |
| 1 | Shahapur | CHATNALLI-2 | CHATNALLI | SC |
| 2 | Shahapur | HOSAKERA DEVULU NAYAK TANDA | HOSAKERA | SC |
| 3 | Shahapur | GOLAGERA CAMP | RASTAPUR | OTHER |
| 4 | Surapur | ALDHAL-1 | ALDHAL | OTHER |
| 5 | Surapur | MARALABHAVI-1 | MALNOOR | OTHER |
| 6 | Surapur | SRINIVASAPUR TANDA | VAJJALA | SC |
| 7 | Surapur | NARASINGAPETH | KHANAPUR SK | ST |
| 8 | Surapur | NARAYANAPUR-1 | NARAYANAPUR | ST |
| 9 | Surapur | KEMBHAVI-5 | KEMBHAVI | SC |
| 10 | Yadgir | BALICHAKRA-4 | BALICHAKRA | OTHER |
| 11 | Gurumatkal | NASALAVAYI-2 | ANAPUR | SC |
| 12 | Gurumatkal | BUDOORU-1 | KAKALWAR | OTHER |
| 13 | Gurumatkal | ASHANALA-3 | RAMASAMUDRA | OTHER |

ಉಪನಿರ್ದೇಶಕರು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಯಾದಗಿರಿ

ಅನುಬಂಧ-2

## ಖಾಲಿ ಇರುವ ಅಂಗನವಾಡಿ ಸಹಾಯಕಿಯರ ಹುದ್ದೆಗಳು

| Sl.no | ICDS Project | Anganwadi Centre name | Grama Panchayath / Ward no. | Reserved for (SC/ST/Others) |
|---|---|---|---|---|
| 1 | 2 | 3 | 4 | 5 |
| 1 | Shahapur | ALDAL-2 | WADAGERA | ST |
| 2 | Shahapur | BENAKANALLI-1 | BILHAR | SC |
| 3 | Shahapur | RAKHAMGERA | SHAHAPUR WARD NO-16 | OTHER |
| 4 | Shahapur | WADAGERA-6 | WADAGERA | ST |
| 5 | Shahapur | GOGI K.-2 | GOGI K | SC |
| 6 | Shahapur | KOLLUR M-2 | KOLLUR M | ST |
| 7 | Shahapur | KYATANALA-1 | KADAMGERA | OTHER (Should be Know Concern community Language along with Kannada Language) |
| 8 | Shahapur | GUNDAGURTHI-1 | GUNDAGURTHI | OTHER |
| 9 | Shahapur | TADABIDI-1 | TADABIDI | OTHER (Should be Know Concern community Language along with Kannada Language) |
| 10 | Shahapur | HURASAGUNDAGI-1 | HURASAGUNDAGI | SC |
| 11 | Shahapur | GANGANALA-2 | NAGANATAGI | SC |
| 12 | Shahapur | SAIDAPUR-1 | NAGANATAGI | OTHER |
| 13 | Shahapur | HALISAGARA | SHAHAPUR WARD NO-22 | ST |
| 14 | Surapur | P.H TEMPLE-2 | SURPUR WARD NO-3 | ST |
| 15 | Surapur | BOVIGALLI | SURPUR WARD NO-15 | OTHER |
| 16 | Surapur | DONNIGERA-1 | SURPUR WARD NO-4 | ST |
| 17 | Surapur | VANAKIHALA | SURPUR WARD NO-27 | SC |
| 18 | Surapur | PETHA AMMAPUR | PETHA AMMAPUR | OTHER |
| 19 | Surapur | BAPPARGA-1 | BARADEVANAL | OTHER |
| 20 | Surapur | KARNALA-1 | SUGUR | ST |
| 21 | Surapur | BAILAPUR TANDA | HEBBAL B | SC |
| 22 | Surapur | ARAKERA J.-3 | ARAKERA J. | SC |
| 23 | Yadgir | ANOOR K | BELAGUNDI | OTHER |
| 24 | Yadgir | BALICHAKRA-3 | BALICHAKRA | OTHER |
| 25 | Yadgir | K N PARK | YADGIR WARD NO-23 | ST |
| 26 | Yadgir | BELAGUNDI-3 | BELAGUNDI | OTHER |
| 27 | Yadgir | FAKIRAWADA-1 | YADGIR WARD NO-01 | OTHER (Should be Know Concern community Language along with Kannada Language) |
| 28 | Yadgir | RAMASAMUDRA TANDA | RAMASAMUDRA | SC |
| 29 | Yadgir | LINGERI | MALHAR | SC |
| 30 | Gurumatkal | NASALAVAYI-1 | ANAPUR | OTHER |
| 31 | Gurumatkal | BACHWAR-1 | HATTIKUNI | SC |

| Sl.no | ICDS Project | Anganwadi Centre name | Grama Panchayath / Ward no. | Reserved for (SC/ST/Others) |
|---|---|---|---|---|
| 1 | 2 | 3 | 4 | 5 |
| 32 | Gurumatkal | WADNALLI-1 | ARAKERA B | ST |
| 33 | Gurumatkal | CHEPETLA-1 | CHEPETLA | SC |
| 34 | Gurumatkal | GADIMOHALLA | GURUMATKAL WARD NO-1 | OTHER (Should be Know Concern community Language along with Kannada Language) |
| 35 | Gurumatkal | SHABUDDI MOHALLA | GURUMATKAL WARD NO-5 | OTHER (Should be Know Concern community Language along with Kannada Language) |

ಉಪನಿರ್ದೇಶಕರು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಯಾದಗಿರಿ